
# ಶ್ರೀಮಾತೆಯವರೊಡನೆ ಮಾತುಕತೆ




(ಶ್ರೀಮಾತೆಯವರು ಸರಳಾ ದೇವಿಯ ಮನೆಗೆ ಬಂದಿದ್ದಾರೆ. ಅಲ್ಲಿ ಅವರಿಗೆ ಸತ್ಕಾರ ನಡೆಯುತ್ತಿದೆ.)

ಶ್ರೀಮಾತೆಯ ಜೊತೆ ಗೋಲಾಪ್ ಮಾ, ನಳಿನಿ ದೀದಿ, ರಾಧಿ ಮತ್ತು ೪–೫ ಜನ ಸಾಧು ಬ್ರಹ್ಮಚಾರಿಗಳು ಬಂದಿದ್ದಾರೆ. ಶ್ರೀಮಾತೆಯವರನ್ನು ಮಹಡಿಯ ಮೇಲೆ ಕರೆತಂದು ಆಸನದಲ್ಲಿ ಕುಳ್ಳಿರಿಸಿ ನಮಸ್ಕರಿಸಿದೆ. ಶ್ರೀಮಾತೆ ಸ್ನೇಹಭಾವದಿಂದ, "ಎಷ್ಟೇ ಬೇಗ ವೆಂದರೂ ಇದಕ್ಕಿಂತ ಮೊದಲು ನಾನು ಬರಲಾಗಲಿಲ್ಲ. ಊಟ ವಾಯಿತೆ?" ಎಂದು ಹೇಳುತ್ತಾ ಗಲ್ಲವನ್ನು ಸವರಿ ಮುತ್ತುಕೊಟ್ಟರು. ಎಲ್ಲವೂ ಪೂರ್ವಸಿದ್ಧತೆಯಂತೆ ನಡೆಯುತ್ತಿತ್ತು. ನಾನು ತಕ್ಷಣ ಊಟದ ವ್ಯವಸ್ಥೆ ಮಾಡತೊಡಗಿದೆ.

ಮೇಲೆ ಗ್ರಾಮಾಫೋನ್‌ನಲ್ಲಿ ಹಾಡನ್ನು ಕೇಳಿಸಲಾಗುತ್ತಿದೆ. ಕೆಲಸದ ಮಧ್ಯದಲ್ಲಿ ಓಡಿಹೋಗಿ ಮೇಲೆ ನೋಡಿದೆ. ಶ್ರೀಮಾತೆ ತಮ್ಮ ಬಾಲಸಹಜ ಆನಂದದಿಂದ ಹಾಡನ್ನು ಕೇಳುತ್ತಿದ್ದಾರೆ. "ಏನಾಶ್ಚರ್ಯ!" ಎಂದು ಚಿಕ್ಕಮಗುವಿನಂತೆ ಉದ್ಗರಿಸುತ್ತಿದ್ದಾರೆ. ಬಿಸಿಲು ಹೆಚ್ಚಾಗಿದ್ದರಿಂದ ಶ್ರೀಮಾತೆ ವರಾಂಡದಲ್ಲಿ ಚಾಪೆಯ ಮೇಲೆ ಮಲಗಿದ್ದಾರೆ. ಸುತ್ತಲೂ ಮಿಕ್ಕವರು ಕುಳಿತಿದ್ದಾರೆ. ಶ್ರೀಮಾತೆಯವರಿಗಾಗಿ ಒಂದು ಕಲ್ಲಿನ ಪಾತ್ರೆಯಲ್ಲಿ ತಣ್ಣೀರನ್ನು (ಐಸ್ ವಾಟರ್) ಇಟ್ಟಿದೆ. ನನ್ನನ್ನು ನೋಡಿ ಶ್ರೀಮಾತೆ ತಕ್ಷಣ ಹೇಳಿದರು, "ಏಯ್, ಸ್ವಲ್ಪ ತಣ್ಣೀರನ್ನು ಕುಡಿದು ಹೋಗು." ಅವರ ಪ್ರಸಾದದ ಆ ನೀರನ್ನು ಕುಡಿದು, ಸ್ವಲ್ಪ ದಣಿವಾರಿಸಿಕೊಂಡು ಮತ್ತೆ ಕೆಳಗೆ, ಅಡುಗೆಮನೆಯ ಕಡೆಗೆ ಓಡಿದೆ. ಎಷ್ಟಾದರೂ ಇಂದು ಕೆಲಸ ಮುಗಿಯಲೊಲ್ಲದು.

ಸಂಜೆ ಪಕ್ಕದ ಕೋಣೆಯಲ್ಲಿ, ನೈವೇದ್ಯಕ್ಕಾಗಿ (ಭೋಗ) ಅಣಿ ಮಾಡಲಾಯಿತು. ಶ್ರೀಮಾತೆ, ಗೋಲಾಪ್ ಮಾ ಗೆ ಭೋಗ ನಿವೇದನೆ ಮಾಡಲು ಹೇಳಿದಾಗ, "ನೀನೇ ಮಾಡು, ನೀನಿದ್ದಾಗ ನಾನೇಕೆ?" ಎಂದಳು. (ಇಲ್ಲಿ ಗೋಲಾಪ್ ಮಾ ಶ್ರೀಮಾತೆಯನ್ನು 'ನೀನು' ಎಂದು ಸಂಬೋಧಿಸುತ್ತಾಳೆ. ಇದು ಪ್ರೀತಿಯಿಂದಲೇ ಹೊರತು ಅಹಂಕಾರದಿಂದಲ್ಲ.) ಹಾಗಾಗಿ ಶ್ರೀಮಾತೆ ತಾವೇ ಭೋಗನಿವೇದನೆಗಾಗಿ ಕುಳಿತರು. "ಆಹಾ! ಎಷ್ಟು ಸುಂದರವಾಗಿ ಅಣಿ ಮಾಡಿದ್ದೀಯಾ!" ಎಂದು ಪ್ರಶಂಸಿಸಿದರು. ಹೀಗೆ ಪ್ರತಿಯೊಂದು ಚಿಕ್ಕಪುಟ್ಟ ವಿಷಯದಲ್ಲೂ ಸಣ್ಣ ಮಗುವಿನಂತೆ ಸಂತೋಷ ವ್ಯಕ್ತಪಡಿಸುತ್ತಾ ನಮ್ಮ ಹೃದಯವನ್ನು ಆನಂದದಿಂದ ತುಂಬಿದರು. ನಂತರ ಶ್ರೀಮಾತೆಯ ಜೊತೆಗೆ ಇತರರೂ ಪ್ರಸಾದಕ್ಕಾಗಿ (ಊಟಕ್ಕಾಗಿ) ಕುಳಿತರು. ಮೊದಲು ಶ್ರೀಮಾತೆ ಊಟ ಮುಗಿಸಿ ವರಾಂಡದಲ್ಲಿದ್ದ ಆರಾಮಕುರ್ಚಿಯ ಮೇಲೆ ಕುಳಿತುಕೊಂಡು ನನಗೆ ಹೇಳಿದರು, "ನೋಡು ನನಗೊಂದು ಪಾನ್ ಕೊಡು." (ಪಾನ್–ವೀಳ್ಯದೆಲೆ, ಅಡಿಕೆ, ಸುಣ್ಣ, ಮಸಾಲೆ ಇತ್ಯಾದಿ ಸೇರಿಸಿ ಮಡಿಸಿ ತಯಾರಿಸುತ್ತಾರೆ.) ಗೋಲಾಪ್ ಮಾ ಗೆ ಬಡಿಸುತ್ತಿದ್ದ ನಾನು ಓಡಿ ಹೋಗಿ ಪಾನ್ ಕೊಟ್ಟು ಬಂದೆ. ಮನಸ್ಸಿನಲ್ಲೇ ನೊಂದುಕೊಂಡೆ, ಶ್ರೀಮಾತೆ ಪಾನ್ ಅನ್ನು ಕೇಳಿ ಪಡೆಯಬೇಕಾಯಿತಲ್ಲಾ ಎಂದು. "ನಾನು ಇಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿ ಸಹ, ನೀನು ಮೊದಲೇ ಅವರಿಗೆ ವೀಳ್ಯದೆಲೆ ಏಕೆ ಕೊಡಲಿಲ್ಲ?" ಎಂದು ಸುಮತಿಯನ್ನು ಗದರಿಸಿದೆ.

ಸ್ವಲ್ಪ ಸಮಯದನಂತರ ಶ್ರೀಮಾತೆ ಹೊರಗಡೆ ಹೋದರು. ನಾನು ಅವರ ಜೊತೆ ದೀಪ ಹಿಡಿದು ಹೋದೆ. ನಿರ್ಜನವಾದ ಈ ಪ್ರದೇಶದಲ್ಲಿ ದಾರಿಯ ಎರಡೂ ಕಡೆ ಕ್ರೋಟನ್‌ಗಿಡಗಳನ್ನು ಹಾಕಲಾಗಿದೆ. ಶ್ರೀಮಾತೆ ಪ್ರೀತಿಯಿಂದ, "ಓಹ್, ಕೆಲಸದಿಂದಾಗಿ ಸ್ವಲ್ಪವೂ ವಿಶ್ರಾಂತಿಯಿಲ್ಲ ನಿನಗೆ. ಒಮ್ಮೆ ನಿನ್ನ ತಾಯಿಯ ಜೊತೆ ಅಲ್ಲಿಗೆ ಬಾ (ಬಾಗ್‌ಬಜಾರಿಗೆ)." ಅಂದು ನಮ್ಮ ಮನೆಗೆ ನನ್ನ ತಾಯಿ ಬಂದಿದ್ದರು. ಸೌಭಾಗ್ಯದಿಂದ ಅವರಿಗೆ ತಮ್ಮ ಮಗಳ ಮನೆಯಲ್ಲಿಯೇ ಶ್ರೀಮಾತೆಯ ದರ್ಶನವಾಯಿತು.

ಹೊರಡುವ ಸಮಯವಾಯಿತು. ಹಿಂದೆ ಎಲ್ಲಿಗೋ ಶ್ರೀಮಾತೆ ಕಾರಿನಲ್ಲಿ ಹೋಗಿದ್ದಾಗ ಅಕಸ್ಮಾತ್ ಅದರ ಚಕ್ರದ ಕೆಳಗೆ ನಾಯಿಯೊಂದು ಸಿಕ್ಕಿ ಸತ್ತಿತಂತೆ. ಆದ್ದರಿಂದ ಕಾರ್‌ನಲ್ಲಿ ಹೋಗಲು ಅವರು ಸುತರಾಂ ಒಪ್ಪುತ್ತಿಲ್ಲ. ಆದರೆ ಬಹಳ ದೂರವಾದ್ದರಿಂದ ಅದರಲ್ಲಿ ಹೋಗದೆ ಬೇರೆ ವಿಧಿ ಇಲ್ಲ. ರಾತ್ರಿ ಬಹಳವಾಗುತ್ತಿದೆ. ಜೊತೆಗೆ ಕಷ್ಟ ಬೇರೆ. ಕೊನೆಗೆ ನಮ್ಮೆಲ್ಲರ ಕೋರಿಕೆಯಂತೆ ಕಾರಿನಲ್ಲಿ ಹೋಗಲು ಒಪ್ಪಿದರು. ಮತ್ತೆ ಮತ್ತೆ ದೇವರಿಗೆ ನಮಸ್ಕರಿಸುತ್ತಾ ನಮ್ಮನ್ನು ಆಶೀರ್ವದಿಸಿ ಗಾಡಿಯಲ್ಲಿ ಕುಳಿತರು.

(*ಮುಂದುವರಿಯುವುದು*)